

ಡಾ.ವಿನೋದ ಛೆಬ್ಬಿ

**ಸುಖದಾಂಪತ್ಯದಲ್ಲಿ ಇಬ್ಬರೂ ಪರಸ್ಪರ ಸಹಾಯ ಮಾಡುವ ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ!**

# 46: ಭಾವ ಪ್ರಭಾವ

ದಾಂಪತ್ಯದಲ್ಲಿ ಗಂಡು ತನ್ನ ಮೇಲೆ ಹೆಣ್ಣಿನ ಭಾವನಾತ್ಮಕ ಪ್ರಭಾವ ಬೀರಲು ಒಪ್ಪಿಕೊಳ್ಳದಿದ್ದರೆ ಮಾತ್ರ ದಾಂಪತ್ಯ ಬಿರುಕು ಬಿಡಲು ಶುರುವಾಗುತ್ತದೆ ಎಂಬ ವೈಜ್ಞಾನಿಕ ವಾಸ್ತವ ಅರ್ಥಮಾಡಿಕೊಂಡೆವು. ಹೆಣ್ಣಿನ ಭಾವನಾತ್ಮಕ ಪ್ರಭಾವವನ್ನು ಒಪ್ಪಿಕೊಳ್ಳುವುದೆಂದರೆ ಹೇಗಿರುತ್ತದೆ ಎಂಬುದನ್ನು ಒಂದು ಸಂಭಾಷಣೆಯ ಮೂಲಕ ತಿಳಿಯೋಣ.

ಹೆಂಡತಿ: ನಾಡಿದ್ದು ಭಾನುವಾರ ಹಬ್ಬ. ಅದಕ್ಕೆ ನಾಳೆ ಶನಿವಾರ ಮನೆ ಸ್ವಚ್ಛಗೊಳಿಸಬೇಕು. ಅದಕ್ಕೆ ನಾಳೆ ಒಂದು ದಿನ ರಜೆಹಾಕಿ ಮನೆಯಲ್ಲಿದ್ದು ಸಹಾಯ ಮಾಡುತ್ತೀಯಾ?

ಗಂಡ: ಅದಕ್ಕೇನಂತೆ, ಖಂಡಿತಾ ಮಾಡ್ತೀನಿ. ನಾಳೆಯ ನನ್ನ ಕೆಲಸವನ್ನು ಸೋಮವಾರ ಬೇಗ ಹೋಗಿ ಮಾಡಿದರೂ ಆಯಿತು.

ಇದೊಂದು ಚಿಕ್ಕ ಸಂಭಾಷಣೆ. ಕೆಲವೇ ಸೆಕೆಂಡುಗಳಲ್ಲಿ ಮುಗಿದುಹೋಗಿದೆ. ಇಲ್ಲೇನು ಕಾಣುತ್ತಿದೆ? ಮೇಲುನೋಟಕ್ಕೆ, ಹೆಂಡತಿಯ ಕಾರ್ಯವು ತನ್ನ ಕಾರ್ಯದ ಮೇಲೆ ಪ್ರಭಾವ ಬೀರಲು ಗಂಡ ಅವಕಾಶ ಕೊಡುತ್ತಿದ್ದಾನೆ ಎಂದು ಕಾಣುತ್ತಿದೆ. ಸ್ವಲ್ಪ ಒಳಹೊಕ್ಕು ನೋಡಿದರೆ, ಹೆಂಡತಿಯ ಭಾವನಾತ್ಮಕತೆಯು (ಹಬ್ಬದಂದು ಮನೆ ಸ್ವಚ್ಛವಾಗಿಲ್ಲದಿದ್ದರೆ ಸಮರ್ಥ ಗೃಹಿಣಿ ಎನ್ನಿಸಿಕೊಳ್ಳಲಾರೆ ಎನ್ನುವ ಅಳುಕು) ತನ್ನ ಭಾವನಾತ್ಮಕತೆಯ ಮೇಲೆ (ಒಂದು ದಿನದ ಕೆಲಸ ಬಾಕಿ ಉಳಿದಲ್ಲಿ ತನ್ನ ಹೊಣೆಗಾರಿಕೆ ಅನಗತ್ಯ ಹೆಚ್ಚುವ ಆತಂಕ) ಪ್ರಭಾವ ಬೀರಲು ಗಂಡ ಅವಕಾಶ ಕೊಡುತ್ತಿದ್ದಾನೆ. ಹಾಗಾದರೆ ಅವನು ತನ್ನ ಆತಂಕವನ್ನು ಹೇಗೆ ನಿಭಾಯಿಸುತ್ತಾನೆ? ಮನೆ ಸ್ವಚ್ಛಗೊಳಿಸುವಾಗ ಹೆಂಡತಿಯೊಂದಿಗೆ ಭಾವನಾತ್ಮಕವಾಗಿ ಕಾಲಕಳೆಯುವ ಅವಕಾಶ ಸಿಗುತ್ತದಲ್ಲ, ಅದರಿಂದ ಭರ್ತಿ ಮಾಡಿಕೊಳ್ಳುತ್ತಾನೆ. ಹೆಂಡತಿಗೆ ಸಹಾಯ ಮಾಡುವಾಗ ಅವಳ ತಪ್ಪುಗಳನ್ನು ಎತ್ತಿತೋರಿಸಲು ಅವಕಾಶವಾಗಬಹುದು. ಆಗ ಹೆಂಡತಿ ಇವನ ಮೇಲೆ ಸಿಡುಕಬಹುದು. ಪರಿಣಾಮ ಇಬ್ಬರ ನಡುವೆ ಟೀಕೆ, ಸ್ವಸಮರ್ಥನೆ, ಗೋಡೆಗತನ ನಡೆಯಬಹುದು – ಗಂಡಹೆಂಡಿರ ಜಗಳ ಗಂಧ ತೀಡಿದ್ಹಾಂಗ ಎಂಬ ಕವಿವಾಣಿಯೇ ಇದೆ. ಇತ್ತ ಹೆಂಡತಿಯೂ ಅಷ್ಟೆ. ಗಂಡ ಎಷ್ಟರಮಟ್ಟಿಗೆ ಅವಳ ಕೆಲಸಕ್ಕೆ ಅನುಕೂಲವಾಗುತ್ತಾನೆ ಎನ್ನುವುದು ಮುಖ್ಯವಲ್ಲ. ಉದಾಹರಣೆಗೆ, ಅಡುಗೆಗೆ ಸಹಾಯಕ್ಕೆಂದು ಕರೆದಾಗ ಗಂಡಂದಿರು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೆ/ಕೆಡಿಸುತ್ತಾರೆ ಎನ್ನುವುದು ಎಲ್ಲ ಗೃಹಿಣಿಯರಿಗೂ ಗೊತ್ತು. ಇಲ್ಲಿ ಸಹಾಯ ಎಷ್ಟು ಆಯಿತು ಎನ್ನುವುದಕ್ಕಿಂತಲೂ ತನ್ನ ಭಾವನೆಗಳಲ್ಲಿ ಸಂಗಾತಿ ಎಷ್ಟು ಸಹಭಾಗಿಯಾಗಿದ್ದಾನೆ ಎನ್ನುವುದೇ ಅವಳಿಗೆ ನೆಮ್ಮದಿ ಕೊಡುವ ವಿಷಯ.

ಒಂದುವೇಳೆ ಇಲ್ಲಿ ಗಂಡನ ಕೆಲಸ ಮಹತ್ವದ್ದಿದ್ದರೆ? ಆಗವನು ಹೀಗೆ ಹೇಳಬಹುದು. ಈ ವಾರ ನನಗೆ ಕೆಲಸ ತುಂಬಾ ಇದೆ. ಮುಂದಿನ ವಾರ ಬಿಡುವಾಗಿರುತ್ತೇನೆ. ಆಗದೆ? ಅದಕ್ಕೆ ಹೆಂಡತಿ ಒಪ್ಪುತ್ತಾಳೋ ಬಿಡುತ್ತಾಳೋ ಅದು ಬೇರೆ ಮಾತು, ಆದರೆ ಗಂಡ ಈ ಸಂದರ್ಭದಲ್ಲಿ ಹೆಂಡತಿಯ ಪ್ರಭಾವವನ್ನು ನಿರಾಕರಿಸಲಿಲ್ಲ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಅದನ್ನು ಹೆಂಡತಿ ಅರ್ಥಮಾಡಿಕೊಂಡು ತನಗೆ ಅನುಕೂಲ ಕ್ರಮ ಕೈಗೊಳ್ಳಬಹುದು – ತಾನೊಬ್ಬಳೇ ಎಲ್ಲ ಕೆಲಸ ಮಾಡಬಹುದು, ಇತರರ ಸಹಾಯ ಪಡೆದುಕೊಳ್ಳಬಹುದು, ಅಥವಾ ಅಗತ್ಯವಾದಷ್ಟೇ ಸ್ವಚ್ಛತೆಗೆ ಕೈಹಾಕಬಹುದು. ಇಲ್ಲಿ ಗಂಡ ಹೆಂಡತಿಯ ಪ್ರಭಾವಕ್ಕೆ ಒಳಗಾಗಲು ತಯಾರಾಗುತ್ತಾನೆ ಎನ್ನುವ ಅಂಶವೇ ಅವರ ಸಾಮರಸ್ಯಕ್ಕೆ ಕಾರಣವಾಗುತ್ತದೆ. ಅದರ ಬದಲು ಗಂಡ, ಮಹತ್ವದ ಕೆಲಸ ನಡೆಯಬೇಕಾದ ಸಮಯಕ್ಕೆ ಸರಿಯಾಗಿ ನೀನು ರಜೆಹಾಕಲು ಹೇಳುತ್ತಿದ್ದೀಯಾ. ಮುಂಚಿನ ವಾರ ಕೇಳಿದರೆ ಏನಾಗುತ್ತಿತ್ತು? ಆಯಿತು. ರಜೆ ಹಾಕುತ್ತೇನೆ ತಗೋ. ಎಂದರೆ? ಇಲ್ಲಿ ಗಂಡ ತನ್ನ ಆತಂಕವನ್ನು ನಿಭಾಯಿಸದೆ ಒದ್ದಾಡುತ್ತಿದ್ದಾನೆ; ಅಷ್ಟೇ ಅಲ್ಲ, ಹೆಂಡತಿಯ ಪ್ರಭಾವವು ತನ್ನನ್ನು ಹಾಳುಮಾಡಿದೆ ಎಂಬ ಸಂದೇಶ ಕೊಡುತ್ತಿದ್ದಾನೆ. ಅಂಥ ಸಮಯದಲ್ಲಿ ಅವನು ಸಹಾಯಕ್ಕೆ ಒದಗಿದರೂ ಭಾವನಾತ್ಮಕ ಅಂತರ ಉಳಿದೇ ಉಳಿಯುತ್ತದೆ.

ಹೆಣ್ಣಿನ ಪ್ರಭಾವಕ್ಕೆ ಒಳಗಾಗಲು ಒಪ್ಪದ ಗಂಡಸರು ಇನ್ನೂ ಎರಡು ವಿಧದ ಪ್ರತಿಕ್ರಿಯೆಗಳನ್ನು ತೋರಿಸುತ್ತಾರೆ. ಕೆಲವರು ಹೆಂಡತಿಗೆ ಸಹಾಯಮಾಡಿ ನಂತರ, ನಿನಗೋಸ್ಕರ ನಾನು ಎಂಥ ತ್ಯಾಗ ಮಾಡಿದೆ ಎಂದು ಕೊಚ್ಚಿಕೊಳ್ಳುತ್ತಾರೆ. ಇದೂ ಕೂಡ ಹೆಂಡತಿಯ ಭಾವನೆಗಳನ್ನು ಅರ್ಥಮಾಡಿಕೊಳ್ಳದಿರುವ, ಹಾಗೂ ಪ್ರಭಾವವನ್ನು ಒಪ್ಪದೆ ತಿರಸ್ಕರಿಸುವುದರ ಲಕ್ಷಣ. ಇನ್ನು ಕೆಲವರು, ನನಗೆ ವಿಪರೀತ ಕೆಲಸ ಇದೆ. ನಿನ್ನ ಕೆಲಸ ನೀನೇ ಮಾಡಿಕೋ ಎಂದು ಥಟ್ಟನೆ ಮೈಲು ದೂರವಾಗುತ್ತಾರೆ – ಇವರಲ್ಲಿ ಏಕಾಂಗಿಭಾವದವರೇ ಹೆಚ್ಚು.

ಈ ಸಂದರ್ಭದಲ್ಲಿ ಕಳೆದ ವರ್ಷ ಭೇಟಿಯಾದ ಒಂದು ಜೋಡಿಯ ನೆನಪಾಗುತ್ತದೆ. ಹಿರಿಯರಿಂದ ಏರ್ಪಟ್ಟು ಮದುವೆಯಾದ ಈ ನವದಂಪತಿಯಲ್ಲಿ ಗಂಡ ಹೆಂಡತಿಯನ್ನು ಇನ್ನೂ ಮುಟ್ಟಿರಲಿಲ್ಲ. ಮಧುಚಂದ್ರದಲ್ಲೂ ಒಂದು ಮುತ್ತು ಕೊಟ್ಟಿರಲಿಲ್ಲ. ವಿಚಾರಿಸಿದಾಗ, ಅವನು ಹೆಂಡತಿಯ ಚಿಕ್ಕ ಮಾತನ್ನೂ ಒಪ್ಪದೆ ತಳ್ಳಿಹಾಕುತ್ತಿರುವುದು ನನ್ನ ಗಮನಕ್ಕೆ ಬಂತು. ಉದಾಹರಣೆಗಾಗಿ, ಊಟದಲ್ಲಿ ಚಪಾತಿಯ ಬದಲು ಅನ್ನವನ್ನು ಮೊದಲು ಬಡಿಸಿದರೆ ಸಿಟ್ಟಿಗೆದ್ದು, ನನಗೇನು ಬೇಕು ಎಂದು ನಮ್ಮಮ್ಮನನ್ನು ಕೇಳಿ ತಿಳಿದುಕೋ! ಎಂದು ಆದೇಶ ನೀಡುತ್ತಿದ್ದ. ಅವನ ಆಳ ಬಗೆದಾಗ ಕಂಡುಬಂದಿದ್ದು ವಿಚಿತ್ರವಾಗಿತ್ತು. ಅಮ್ಮನೊಡನೆಯ ಬೆಸುಗೆಯಿಂದ ಇನ್ನೂ ಹೊರಬರದ ಅವನು ಹೆಂಡತಿಯ ಪ್ರಭಾವವು ತನ್ನ ಮೇಲೆ ಬೀಳಲು ಅವಕಾಶ ಕೊಡುತ್ತಿರಲಿಲ್ಲ. ಅವನ ಭಾವನಾತ್ಮಕ ಹೊಕ್ಕಳುಬಳ್ಳಿ ಇನ್ನೂ ಅಮ್ಮನೊಡನೆ ಅಂಟಿಕೊಂಡಿತ್ತು! ಈ ತ್ರಿಕೋನೀಕರಣವನ್ನು ಅರ್ಥಮಾಡಿಕೊಂಡ ಹೆಂಡತಿಯ ತಾಯ್ತಂದೆಯರು ಅವರಿಬ್ಬರನ್ನೂ ನನ್ನ ಹತ್ತಿರ ಕರೆದುಕೊಂಡು ಬಂದಿದ್ದರು. ಚಿಕಿತ್ಸೆಯ ಶುರುವಿನಲ್ಲಿ ಅವರಿಬ್ಬರನ್ನೂ ಅವನ ಅಮ್ಮನ ಪ್ರಭಾವದಿಂದ ಕೆಲವು ಕಾಲವಾದರೂ ದೂರವಿಡುವುದು ಅಗತ್ಯವಾಗಿತ್ತು. ಇದನ್ನು ಸೂಚಿಸಲಾಗಿ ಅವನು ವಿಪರೀತ ಆತಂಕಕ್ಕೊಳಗಾಗಿ ಚಿಕಿತ್ಸೆಗೆ ಬರುವುದಕ್ಕೆ ಹಿಂದೆಮುಂದೆ ನೋಡಿದ. ಈ ವಿಷಯವನ್ನು ನಾನು ಅವನ ಅಮ್ಮನಿಗೆ ಕರೆಮಾಡಿ ತಿಳಿಸಿ ಸಹಾಯ ಕೋರಿದಾಗ ಅವಳು ಹೇಳಿದ್ದು: ಸೊಸೆ ಎಂದರೆ ಅತ್ತೆ ಹಾಗೂ ಗಂಡ ಹೇಳಿದಂತೆ ಕೇಳಿಕೊಂಡಿರಬೇಕು. ಬದಲು ಈ ರೀತಿ ಮನೆ ಒಡೆಯುವ ಸೊಸೆ ನನಗೆ ಬೇಕಿಲ್ಲ! ಬುದ್ಧಿವಂತ ಹೆಂಡತಿ ಹೆಚ್ಚು ಕಾಯದೆ ವಿಚ್ಛೇದನಕ್ಕೆ ಅರ್ಜಿಹಾಕಿಕೊಂಡಳು!

ಸುಖಸಂಸಾರದಲ್ಲಿ ಸಂಗಾತಿಗಳಿಬ್ಬರೂ ಪರಸ್ಪರ ಸಹಾಯ ಮಾಡುವ ಅವಕಾಶವನ್ನು ಹುಡುಕುತ್ತ ಪರಸ್ಪರ ಪ್ರಭಾವಕ್ಕೆ ಒಳಗಾಗಲು ಒಪ್ಪುತ್ತಾರೆ. ಉದಾಹರಣೆಗೆ ನಾನು ನೋಡಿದ ಒಂದು ದಂಪತಿಯಲ್ಲಿ ಹೆಂಡತಿಯು ಯಾವುದೇ ಮಹತ್ವದ ವಿಷಯ ಮಾತಾಡಲು ಬಾಯಿತೆರೆದಾಗ ಅವನು, ನೀನು ಯಾವಾಗಲೂ ಸರಿಯಾದುದನ್ನೇ ಹೇಳುತ್ತೀಯಾ ಅಂತ ನನಗ್ಗೊತ್ತು. ಅದೇನೆಂದು ಹೇಳು. ಎಂದು ನಸುನಗುತ್ತಾನೆ. ವಿಚಿತ್ರವೆಂದರೆ ಅವನು ಹೆಚ್ಚಿನಂಶ ಹೆಂಡತಿಯ ವಿಚಾರಕ್ಕೆ ತಕ್ಕಂತೆ ನಡೆದುಕೊಂಡಿಲ್ಲ. ಇನ್ನೂ ವಿಚಿತ್ರವೆಂದರೆ ಇದಕ್ಕೆ ಹೆಂಡತಿಯ ಆಕ್ಷೇಪಣೆ ಎಳ್ಳಷ್ಟೂ ಇಲ್ಲ! ಇದು ಹೇಗೆ ಎಂದು ಸ್ವಲ್ಪ ಯೋಚಿಸಿದರೂ ಅರಿವಾಗುತ್ತದೆ: ಗಂಡ ಹೆಂಡತಿಯ ಭಾವನಾತ್ಮಕ ಪ್ರಭಾವಕ್ಕೆ ತನ್ನನ್ನು ತಾನು ಒಪ್ಪಿಸಿಕೊಂಡರೂ ತನ್ನ ಪ್ರತ್ಯೇಕತೆಯನ್ನೂ ಅಷ್ಟೇ ಚೆನ್ನಾಗಿ ಕಾಪಾಡಿಕೊಳ್ಳುತ್ತಾನೆ!

ಯಾರದೋ ಒಂದು ಮನೆಯ ಹಜಾರದಲ್ಲಿ ಒಂದು ಫಲಕ ನೋಡಿದ್ದು ನೆನಪಿದೆ. ಅದರಲ್ಲಿ ದೊಡ್ಡ ಅಕ್ಷರಗಳಲ್ಲಿ, ನಾನು ಈ ಮನೆಯ ನಿರಂಕುಶ ಪ್ರಭು! ಎಂದಿದೆ. ವಾಕ್ಯದ ಕೆಳಗೆ ಚಿಕ್ಕ ಅಕ್ಷರಗಳಲ್ಲಿ ಹೀಗಿದೆ: ಹೀಗೆ ಹೇಳಲು ಹೆಂಡತಿಯ ಅಪ್ಪಣೆ ಪಡೆದುಕೊಂಡಿದ್ದೇನೆ. ತಮಾಷೆ ಎಂದೆನಿಸಿದರೂ ಸರಳ ವಾಸ್ತವಕ್ಕೆ ಕನ್ನಡಿ ಹಿಡಿದಂತಿದೆ.

ವಿಪರ್ಯಾಸವೆಂದರೆ, ಹೆಚ್ಚಿನ ಭಾವನಿರ್ಧಾರಗಳು ಇಷ್ಟು ಸರಳವಾಗಿರುವುದಿಲ್ಲ. ಕೆಲವೊಮ್ಮೆ ಸಂಗಾತಿಯ ಪ್ರಭಾವಕ್ಕೆ ಒಳಗಾಗುವುದು ಸಂಕೀರ್ಣವಾಗುತ್ತದೆ. ಇದರ ಬಗೆಗೆ ಮುಂದಿನ ಸಲ ನೋಡೋಣ.

**ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.**
**ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 2ರಿಂದ 4ರ ತನಕ);**
**ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)**
**ಲೇಖಕರ ವಿಳಾಸ: www.medisex.org**